# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 213 | Pages. 2 | Date: 02-08-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 213 – ಪುಟಗಳು : 2 | 02-08-2026 | ಭಾನುವಾರ | Ph: 8762954248 | ದರ : ₹1


# ಪತ್ನಿ ಕೊಂದು ಆತ್ಮಹತ್ಯೆಗೆ ಶರಣಾದ ಪತಿ

## ವಿಡಿಯೊದಲ್ಲಿ ಮಾಹಿತಿ ಬಿಚ್ಚಿಟ್ಟ | ಮಹಿಳೆ ಮೃತದೇಹಕ್ಕೆ ಶೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಕೆಸಗೋಡು ಗ್ರಾಮದಲ್ಲಿ ಹೃದಯ ವಿದ್ರಾವಕ ಘಟನೆ ನಡೆದಿದ್ದು, ಕುಟುಂಬ ಕಲಹ ಹಿನ್ನೆಲೆಯಲ್ಲಿ ಪತಿಯೊಬ್ಬ ಪತ್ನಿಯನ್ನು ಕೊಂದು ತಾನೂ ಆತ್ಮಹತ್ಯೆಗೆ ಶರಣಾಗಿದ್ದಾನೆ.

ಗಗನ (35) ಕೊಲೆಯಾದ ಗೃಹಿಣಿಯಾಗಿದ್ದು, ರಘು (41) ಎಂಬಾತ ಕೃತ್ಯ ಎಸಗಿ ತಾನೂ ಜೀವ ಕಳೆದುಕೊಂಡಿದ್ದಾನೆ. ಆದರೆ ಗಗನ ಮೃತದೇಹ ಇನ್ನೂ ಪತ್ತೆಯಾಗಿಲ್ಲ. ಅರೇಹಳ್ಳಿ ಪೊಲೀಸರು ಹಾಗೂ ಸಂಬಂಧಿಕರು ಹುಡುಕಾಟ ಮುಂದುವರಿಸಿದ್ದಾರೆ.

ಹಳೇಬೀಡು ಹೋಬಳಿಯ ಸಾಣೇನಹಳ್ಳಿ ಗ್ರಾಮದ ಗಗನ, ಕೆಸಗೋಡು ಗ್ರಾಮದ ರಘು 13 ವರ್ಷಗಳ ಹಿಂದೆ ಮದುವೆ ಆಗಿದ್ದರು. ದಂಪತಿಗೆ 12 ವರ್ಷದ ಹಾಗೂ 6 ವರ್ಷದ ಇಬ್ಬರು ಗಂಡು ಮಕ್ಕಳಿದ್ದಾರೆ.

ಶುಕ್ರವಾರ ಮಧ್ಯಾಹ್ನ ರಘು ತನ್ನ ಪತ್ನಿಯೊಂದಿಗೆ ಕಾರಿನಲ್ಲಿ ಕೆಸಗೋಡು ಗ್ರಾಮಕ್ಕೆ ತೆರಳಿದ್ದ. ಸಂಜೆ 6.30 ಗಂಟೆ ಸುಮಾರಿಗೆ ಕೆಸಗೋಡು ಗ್ರಾಮಕ್ಕೆ ಬಂದಿದ್ದ. ಆ ವೇಳೆಗಾಗಲೇ ಪತ್ನಿಯನ್ನು ಕೊಂದಿದ್ದ. ನಂತರ ತಾನೇ ಪತ್ನಿಯನ್ನು ಕೊಂದಿರುವ



ವಿಷಯವನ್ನು ಬಹಿರಂಗ ಪಡಿಸಿದ್ದಾನೆ. ಪತ್ನಿಯನ್ನು ಕಾರಿನಲ್ಲೇ ಕೊಲೆಗೈದು, ಬಳಿಕ ಯಗಚಿ ನಾಲೆಗೆ ಮೃತದೇಹ ಎಸೆದಿರುವ ಶಂಕೆ ವ್ಯಕ್ತವಾಗಿದೆ. ನಂತರ ಕೆಸಗೋಡು ಗ್ರಾಮಕ್ಕೆ ಬಂದು ರಘು

### ಗಂಡನನ್ನು ಬಿಟ್ಟು ಬರುವುದಾಗಿ ಹೇಳಿದ್ದಳು

ಮೃತೆ ಗಗನ ಅವರ ಸಹೋದರ ಯೋಗೀಶ್ ಸಹ ವಿಡಿಯೋ ಬಿಡುಗಡೆ ಮಾಡಿದ್ದು, ಅಕ್ಕನಿಗೆ ರಘು ವಿಪರೀತ ಕಿರುಕುಳ ನೀಡುತ್ತಿದ್ದ. ಪತಿ ಜೊತೆ ಬದುಕಲು ಆಗುವುದಿಲ್ಲ, ಬಿಟ್ಟು ಬರುತ್ತೇನೆ ಎಂದು ಎರಡು ತಿಂಗಳ ಹಿಂದೇಯೇ ಹೇಳಿದ್ದಳು ಎಂದಿದ್ದಾರೆ.

ಜೀತದ ಆಳು ರೀತಿ ನನ್ನ ಅಕ್ಕ ಅವರ ಮನೆಯಲ್ಲಿ ದುಡಿದಿದ್ದಳು. ನೀನು ಬಿಟ್ಟು ಹೋದರೆ ನಿನ್ನ ಕೊಂದೇ ತಿರುತ್ತನೆಂದು ಆಕೆ ಗಂಡ ಧಮ್ಕಿ ಹಾಕಿದ್ದ. ಆತನಿಗೆ ನಾವೆಲ್ಲಾ ಬುದ್ದಿ ಹೇಳಿ ನನ್ನ ಅಕ್ಕನನ್ನ ಬಿಟ್ಟು ಬಂದಿದ್ವಿ. ಆತ ಮಾಡಿರೋ ವಿಡಿಯೋ ಸುಳ್ಳು . ಸಣ್ಣಪುಟ್ಟ ವಿಚಾರಕ್ಕೂ ಆತ ಅಕ್ಕನಿಗೆ ಹೊಡೆಯುತ್ತಿದ್ದನೆಂದು ಯೋಗೀಶ್ ಕಣ್ಣೀರು ಸುರಿಸಿದ್ದಾರೆ.

ನೇಣಿಗೆ ಶರಣಾಗಿದ್ದಾನೆ. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಅಕ್ರಮ ಸಂಬಂಧ ಕಾರಣ!

ಗಗನ ಕೊಲೆಗೆ ಅಕ್ರಮ ಸಂಬಂಧ ಕಾರಣ ಎಂಬ ಶಂಕೆ ಮೂಡಿದೆ. ಪತ್ನಿ ಕೊಂದ ನಂತರ 1 ನಿಮಿಷದ ವಿಡಿಯೋ ಮಾಡಿರುವ ರಘು, ಪತ್ನಿಯನ್ನು ತೀವ್ರವಾಗಿ ನಿಂದಿಸಿದ್ದಾನೆ. ಆಕೆಗೆ ಬೇರೊಬ್ಬನೊಂದಿಗೆ ಅಕ್ರಮ ಸಂಬಂಧ ಇತ್ತು. ನಾನು ಹೊರಗೆ ಬಂದ ನಂತರ ಮೊಬೈಲ್ ಕರೆ ಮಾಡಿ ಪ್ರಿಯಕರನ್ನು ಕರೆಸಿಕೊಳ್ಳುತ್ತಿದ್ದಳು. ಬೇಕಂತಲೇ ನನ್ನಿಂದ ಅಂತರ ಕಾಯ್ದುಕೊಳ್ಳುತ್ತಿದ್ದಳು. ಕುಟುಂಬದ ಗೌರವಕ್ಕಾಗಿ ನಾನು ಸಹಿಸಿಕೊಂಡಿದ್ದೆ. ಆದರೆ ಆಕೆಯ ವರ್ತನೆ ಯಾವಾಗ ಮಿತಿ ಮೀರಿತೋ, ಇದರಿಂದ ಮನನೊಂದು ಕೊಲೆ ಮಾಡಿದ್ದಾನೆ ಎಂದು ವಿಡಿಯೋದಲ್ಲಿ ಹೇಳಿದ್ದಾನೆ.

# ಜೀವಿತದ ಕೊನೆವರೆಗೂ ಶಿಕ್ಷಕರ ಗೌರವಿಸಿ: ತಮ್ಮಣ್ಣಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಗುರು ಸಮಾಜದಲ್ಲಿ ಸದಾ ಗುರುವಾಗಿಯೇ ಇರಬೇಕು. ಬದುಕಿನ ದಾರಿ ಹೇಳಿಕೊಟ್ಟ ವಿದ್ಯಾದಾತರನ್ನು ಜೀವನದ ಕೊನೆಯ ಕ್ಷಣದ ವರೆಗೆ ಗೌರವಿಸಬೇಕು ಎಂದು ನಿವೃತ್ತ ಶಿಕ್ಷಣಾಧಿಕಾರಿ ಡಾ. ಜೆ.ಬಿ.ತಮ್ಮಣ್ಣಗೌಡ ಹೇಳಿದರು.

ತಾಲ್ಲೂಕಿನ ಜಿನ್ನೇನಹಳ್ಳಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಓಂಕಾರಮೂರ್ತಿ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಗುರು ಎರಡು ಮಾತ್ರೆಯ ಅಕ್ಷರವಾದರೆ ಲಘು ಒಂದು ಮಾತ್ರೆಯ ಅಕ್ಷರ. ಗುರುವಿನಿಂದ ಗೌರವ ಬರುತ್ತದೆ, ಲಘುವಿನಿಂದ ಲಾಘವ ಬರುತ್ತದೆ. ಲಾಘವ ಎಂದರೆ ಗಟ್ಟಿ ಇಲ್ಲದೆ ಇರುವುದು ಅಂದರೆ ಟೊಳ್ಳಾದ ಎಂದರ್ಥ. ಹಾಗಾಗಿ ಗಟ್ಟಿತನವಿರುವ ಗುರುವಿಗೆ ಸಮಾಜದಲ್ಲಿ ಎಂದೆಂದೂ ಗೌರವ ಇರುತ್ತದೆ ಎಂದರು.

ಎಲ್ಲರೂ ಕಲಿತ ಶಾಲೆಯನ್ನು ಪ್ರೀತಿಸಬೇಕು. ಶಾಲೆ ಅಕ್ಷರ ಸಂಪತ್ತನ್ನು ಕೊಡುವ ಕೇಂದ್ರ.



ಅಕ್ಷರ ಸಂಪತ್ತು ಎಂದರೆ ಮೂರಕ್ಷರದ ಪದವೇ ತಿಳಿಸುವಂತೆ ನಾಶವಾಗದೆ ಇರುವಂತದ್ದು. ಈ ನಾಶವಾಗದೆ ಇರುವ ಸಂಪತ್ತನ್ನು ಶಾಲೆ ಕೊಡುವುದರಿಂದ ಶಾಲೆಗೆ ಬೆಲೆ ಕಟ್ಟಲು ಆಗುವುದಿಲ್ಲ. ಅಂತಹ ಶಾಲೆಯನ್ನು ಕಟ್ಟುವ, ಬೆಳೆಸುವ ಮತ್ತು ಉಳಿಸುವ ಮನೋಭಾವ ಸಮಾಜದ ಸರ್ವ ಸದಸ್ಯರಲ್ಲೂ ಇರಬೇಕೆಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್ ಮಾತನಾಡಿ, ಶಿಕ್ಷಣ ಸೇವೆ ಪವಿತ್ರವಾದದ್ದು ಅಂತೆಯೇ ಶಿಕ್ಷಕ ವೃತ್ತಿಯೂ ಪವಿತ್ರವಾದದ್ದು. ಶಿಕ್ಷಕರು ತಮ್ಮ ವೃತ್ತಿಯಲ್ಲಿ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಸೇವೆ ಮಾಡಿದರೆ ಶಿಷ್ಯರಿಂದ, ಪೋಷಕರಿಂದ ಮತ್ತು ಸಮಾಜದಿಂದ ಗೌರವ ಸಿಗುತ್ತದೆಂದರು.

ನಿವೃತ್ತ ಶಿಕ್ಷಕ ಓಂಕಾರಮೂರ್ತಿ ಅವರು ಮಾತನಾಡಿ, ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಅಕ್ಷರ ದಾಸೋಹ ಅಧಿಕಾರಿ ಉಮಾಶಂಕರ್, ಶಿಕ್ಷಣ ಸಂಯೋಜಕ ಶ್ರೀನಿವಾಸ್ ಮಾತನಾಡಿದರು. ಕೆಜಿಐಡಿ ಅಧಿಕಾರಿ ಕುಮಾರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪುರುಷೋತ್ತಮ್, ಎಂಜಿನಿಯರ್ ದರ್ಶನ್ ಭಾಗವಹಿಸಿದ್ದರು. ಶಿಕ್ಷಕಿ ಲತಾ ಸ್ವಾಗತಿಸಿದರು. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

# ತಮಿಳುನಾಡಿಗೆ ಕಾವೇರಿ ನೀರು ಖಂಡಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಮಿಳುನಾಡಿಗೆ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶ ಮಾಡಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣದ ಕಾರ್ಯಕರ್ತರು ಶನಿವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕರವೇ ಜಿಲ್ಲಾಧ್ಯಕ್ಷ ಸಿ.ಡಿ. ಮನುಕುಮಾರ್ ಮಾತನಾಡಿ, ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ನೀರನ್ನು ಸಂರಕ್ಷಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ಯಾವುದೇ ಕಾರಣಕ್ಕೂ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವ ರೀತಿಯಲ್ಲಿ ತಮಿಳುನಾಡಿಗೆ ನೀರು ಬಿಡಬಾರದು ಎಂದು ಆಗ್ರಹಿಸಿದರು.



ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ದೃಢ ನಿಲುವು ತಾಳಿ, ಕೇಂದ್ರ ಸರ್ಕಾರ ಹಾಗೂ ಕಾವೇರಿ ಪ್ರಾಧಿಕಾರಗಳ ಮುಂದೆ ನೀರಿನ ವಾಸ್ತವ ಪರಿಸ್ಥಿತಿಯನ್ನು ಸಮರ್ಥವಾಗಿ ಮಂಡಿಸಬೇಕು. ಸಿಡಬ್ಲ್ಯೂಆರ್ ಸಿ-ಸಿಡಬ್ಲ್ಯೂಎಂಎ ಆದೇಶದ ವಿರುದ್ಧ ತಕ್ಷಣ ಮೇಲ್ಮನವಿ ಸಲ್ಲಿಸಿ, ರಾಜ್ಯದ ಜಲಾಶಯಗಳ ನೀರಿನ ಪ್ರಮಾಣ, ಮಳೆ ಕೊರತೆ, ಕುಡಿಯುವ ನೀರಿನ ಅವಶ್ಯಕತೆ ಹಾಗೂ ಕೃಷಿ ಬೇಡಿಕೆ ಕುರಿತು ವೈಜ್ಞಾನಿಕ ಅಂಕಿ-ಅಂಶ ಮಂಡಿಸಬೇಕು. ಅಗತ್ಯವಿದ್ದಲ್ಲಿ ಸುಪ್ರೀಂಕೋರ್ಟ್ ಸೇರಿ ದೇಶದ ಎಲ್ಲ ಕಾನೂನು ವೇದಿಕೆಗಳಲ್ಲಿ ಪ್ರಬಲ ವಾದ ಮಂಡಿಸಬೇಕು ಎಂದು ಒತ್ತಾಯಿಸಿದರು.

ಕುಡಿಯುವ ನೀರು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಾಗಿದ್ದು, ಕಾವೇರಿ ಜಲಾನಯನ ಪ್ರದೇಶದ ಎಲ್ಲ ನಗರ, ಪಟ್ಟಣ ಹಾಗೂ ಗ್ರಾಮಗಳಿಗೆ ಅಗತ್ಯವಿರುವ ಕುಡಿಯುವ ನೀರನ್ನು ಮೊದಲು ನೀಡಬೇಕು. ಕೃಷಿಗೆ ಅಗತ್ಯವಿರುವ ನೀರನ್ನು ಖಚಿತಪಡಿಸಿ, ನಾಡಿಗೆ ಸಂಕಷ್ಟ ಎದುರಾಗದಂತೆ ಗಮನ ಹರಿಸಬೇಕು ಎಂದು ಮನವಿ ಮಾಡಿದರು.

ಮುಖಂಡರಾದ ತನುಗೌಡ, ಶಿವಕುಮಾರ್, ಶಿವಣ್ಣಗೌಡ, ಖಾದರ್, ಓಹಿಲೇಶ್, ಗಗನಗೌಡ, ಅಭಿಗೌಡ, ಮಧು ಕರಡೇವು, ಪ್ರೀತಂ, ಚಂದ್ರಶೇಖರ್, ನಟರಾಜ್, ಸೋಮಶೇಖರ್, ಕಿರಣ್ ಕುಮಾರ್, ಶ್ರೀನಿವಾಸ್, ಪ್ರಕಾಶ್ ಹರಳೆ, ಆಶಾ, ವೀಣಾ ಸೇರಿ ಜಿಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಕ್ಷೇತ್ರ ಮೀಸಲಾತಿ ಬದಲಾವಣೆ ಬಗ್ಗೆ ಅನಗತ್ಯ ಹೇಳಿಕೆ ಬೇಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮೈಸೂರು ಜಿಲ್ಲೆಯ ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಅವರು ಸಕಲೇಶಪುರ ವಿಧಾನಸಭಾ ಕ್ಷೇತ್ರದ ಕುರಿತು ನೀಡಿರುವ ಹೇಳಿಕೆ ಅನಗತ್ಯ ಹಾಗೂ ವಾಸ್ತವಕ್ಕೆ ದೂರವಾಗಿದೆ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಾಜ್ ಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಟೀಕಿಸುವ ಭರದಲ್ಲಿ ಸಕಲೇಶಪುರ ಕ್ಷೇತ್ರದ ಬಗ್ಗೆ ಅವಹೇಳನಕಾರಿ ರೀತಿಯಲ್ಲಿ ಮಾತನಾಡಿರುವುದು ಖಂಡನೀಯ. ಪ್ರತಾಪ್ ಸಿಂಹ ಅವರು ಹಾಸನ ಜಿಲ್ಲೆಯವರಾಗಿದ್ದರೂ, ಮೈಸೂರಿನಲ್ಲಿ ಎರಡು ಬಾರಿ ಸಂಸದರಾಗಿ ಜನರ ವಿಶ್ವಾಸ ಗಳಿಸಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅವರ ಬಗ್ಗೆ ಕೀಳುಮಟ್ಟದ ಹೇಳಿಕೆಗಳನ್ನು ಸಕಲೇಶಪುರದ ಜನತೆ ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಸಕಲೇಶಪುರ ವಿಧಾನಸಭಾ ಕ್ಷೇತ್ರ ಈಗಲೂ ಮೀಸಲು ಕ್ಷೇತ್ರವಾಗಿದ್ದು, ಕ್ಷೇತ್ರ ಪುನರ್ವಿಂಗಡಣೆ ಬಗ್ಗೆ ಊಹಾಪೋಹಗಳ ಆಧಾರದ ಮೇಲೆ



ಮಾತನಾಡುವುದು ಸರಿಯಲ್ಲ. ಕ್ಷೇತ್ರ ಪುನರ್ವಿಂಗಡಣೆ ಕುರಿತು ತೀರ್ಮಾನಿಸುವ ಅಧಿಕಾರ ಯಾರೊಬ್ಬರ ವೈಯಕ್ತಿಕ ಅಭಿಪ್ರಾಯಕ್ಕೆ ಸೇರಿದ್ದಲ್ಲ. ಹೀಗಿರುವಾಗ, ಮುಂದಿನ ಚುನಾವಣೆಯಲ್ಲಿ ಸಕಲೇಶಪುರ ಸಾಮಾನ್ಯ ಕ್ಷೇತ್ರವಾಗುತ್ತದೆ, ತಾನು ಅಥವಾ ಪ್ರತಾಪ್ ಸಿಂಹ ಸ್ಪರ್ಧಿಸುತ್ತಾರೆ ಎಂಬ ಹೇಳಿಕೆಗಳು ಕೇವಲ ಕಲ್ಪನೆಯಷ್ಟೇ ಎಂದು ಹೇಳಿದರು.

ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಜನರ ನಡುವೆ ನಿರಂತರವಾಗಿ ಸಂಚರಿಸಿ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುತ್ತಿದ್ದು, ದಿನದ ಬಹುಪಾಲು ಸಮಯವನ್ನು ಕ್ಷೇತ್ರದ ಅಭಿವೃದ್ಧಿಗೆ ಮೀಸಲಿಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಕ್ಷೇತ್ರದ ಕುರಿತು ಅನಗತ್ಯ ರಾಜಕೀಯ ಹೇಳಿಕೆಗಳನ್ನು ನೀಡುವುದು ಶೋಭೆಯಲ್ಲ ಎಂದು ಅಭಿಪ್ರಾಯಪಟ್ಟರು.

2028ರ ವಿಧಾನಸಭಾ ಚುನಾವಣೆಯಲ್ಲಿಯೂ ಸಕಲೇಶಪುರ ಕ್ಷೇತ್ರ ಮೀಸಲಾಗಿಯೇ ಮುಂದುವರಿದರೆ ಸಿಮೆಂಟ್ ಮಂಜು ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾಗಲಿದ್ದು, ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಬೇಕು ಎಂಬುದು ಕ್ಷೇತ್ರದ ಜನರ ಆಶಯವಾಗಿದೆ ಎಂದು ಹೇಳಿದರು.

ಕ್ಷೇತ್ರ ಪುನರ್ವಿಂಗಡಣೆ ನಡೆದರೂ ಮಹಿಳಾ ಮೀಸಲಾತಿ ಸೇರಿದಂತೆ ವಿವಿಧ ಸಂವಿಧಾನಾತ್ಮಕ ಅಂಶಗಳು ಅನ್ವಯವಾಗಲಿದ್ದು, ಈಗಲೇ ಸಾಮಾನ್ಯ ಕ್ಷೇತ್ರವಾಗುತ್ತದೆಂದು ಹೇಳಿಕೊಂಡು ಸ್ಪರ್ಧೆಯ ಕನಸು ಕಾಣುವುದು ಹಗಲುಗನಸಷ್ಟೇ ಎಂದು ರಾಜ್‌ಕುಮಾರ್ ವ್ಯಂಗ್ಯವಾಡಿದರು.

# ತಾಳ್ಮೆ ಕಳೆದುಕೊಂಡಿರುವ ಯುವ ಸಮೂಹ

## ಪತ್ರಕರ್ತೆ ಭಾವನಾ ಬೆಳಗೆರೆ ಆತಂಕ | ಪತ್ರಕರ್ತರ ಸಂಘದಿಂದ ತಿಂಗಳ ಕಾರ್ಯಕ್ರಮ


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೆನ್ ಜಿ ಪೀಳಿಗೆಗೆ ತಾಳ್ಮೆ ಇಲ್ಲ. ಎಲ್ಲದಕ್ಕೂ ತಕ್ಷಣ ಪ್ರತಿಕ್ರಿಯೆ ಬಯಸುತ್ತಾರೆ. ಸಾಮಾಜಿಕ ಜಾಲತಾಣಗಳು ಅವರನ್ನು ಒಂದುಗೂಡಿಸುತ್ತಿದೆ ಎಂದು ಹಾಯ್ ಬೆಂಗಳೂರು ಹಾಗೂ ಓ ಮನಸೇ ಪತ್ರಿಕೆ ಸಂಪಾದಕಿ ಭಾವನಾ ಬೆಳಗೆರೆ ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯಿಂದ ಶನಿವಾರ ನಡೆದ ಸ್ಟಡಿ ವಿತ್ ಸೊಸೈಟಿ ತಿಂಗಳ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲು ಇನ್‌ಸ್ಟಾಗ್ರಾಂ, ಎಕ್ಸ್ ಖಾತೆ ಬಳಸುತ್ತಿರುವುದು ಖಂಡನೀಯ. ಹೇಗಾದರೂ ಸರಿ ದೇಶದ ಜನರಿಗೆ ಸಂದೇಶ ನೀಡಿದರೆ ಸಾಕೆಂದು ಅವರು ಬಯಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದರೆ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆಂಬ ಭಯವೂ ಕಾಡುತ್ತಿರಬಹುದು ಎಂದರು.

ಸಮಾಜದಲ್ಲಿ ನಡೆಯುವ ಅನ್ಯಾಯ, ಭ್ರಷ್ಟಾಚಾರ ಹಾಗು ಅನೈತಿಕತೆಯನ್ನು ಪ್ರಶ್ನಿಸುವ ಪತ್ರಕರ್ತ ತಾನು ಮೊದಲು ಶುದ್ಧನಾಗಿರಬೇಕು. ಯಾರ ಹಂಗಿಲ್ಲದೆ ಪತ್ರಿಕೋದ್ಯಮ ಮಾಡುವವರು ಮಾತ್ರ ಯಶಸ್ವಿಯಾಗಲು ಸಾಧ್ಯ. ಆ ನಿಟ್ಟಿನಲ್ಲಿ ತಂದೆ ರವಿ ಬೆಳಗರೆ ಛಾಪು ಮೂಡಿಸಿದ್ದರು.

ಹಾಯ್ ಬೆಂಗಳೂರು ಪತ್ರಿಕೆಯಲ್ಲಿ ರವಿ ಬೆಳಗೆರೆ ಜಾಹಿರಾತು ಪ್ರಕಟಿಸಲಿಲ್ಲ. ಹಣಕ್ಕಾಗಿ ಅವರು ಯಾವತ್ತಿಗೂ ಪತ್ರಿಕೋದ್ಯಮ ಮಾಡಲಿಲ್ಲ. ಓದುಗರು ದುಡ್ಡು ಕೊಟ್ಟು ಪತ್ರಿಕೆ ಖರೀದಿಸುತ್ತಾರೆಂಬ ವಿಶ್ವಾಸ ಅವರಿಗಿತ್ತು. ಆ




ನಂಬಿಕೆಯಿಂದಲೇ ಅವರು ದಶಕಗಳ ಕಾಲ ಪತ್ರಿಕೆ ಮುನ್ನಡೆಸಿಕೊಂಡು ಬಂದಿದ್ದರು ಎಂದರು.

ಪತ್ರಕರ್ತರು ಯಾವ ಸಂದರ್ಭದಲ್ಲೂ ಸತ್ಯದ ಪರ ನಿಲ್ಲಬೇಕು. ಯಾವ ಸುದ್ದಿ ಮುಖ್ಯವಾಗಿ ಪರಿಗಣಿಸಬೇಕೆಂಬ ಅರಿವು ಪತ್ರಕರ್ತನಿಗೆ ಇರಬೇಕು. ಆ ವಿದ್ಯೆಯನ್ನು ನಾನು ತಂದೆ ಅವರ ಗರಡಿಯಲ್ಲಿ ಕಲಿತಿದ್ದೇನೆ. ಸತ್ಯ ಬರೆಯುತ್ತಿದ್ದರು, ನಿಷ್ಠುರ ಆಗಿದ್ದರೆಂಬ ಕಾರಣಕ್ಕೆ ಅಪ್ಪನ ಮೇಲೆ 482 ಪ್ರಕರಣ ದಾಖಲಾಗಿದ್ದವು. ಆದರೂ ಅವರು ಬರೆಯಲು ಹಿಂಜರಿಯಲಿಲ್ಲ, ಪತ್ರಕರ್ತರು ವ್ಯವಸ್ಥೆಯಲ್ಲಿನ ತಪ್ಪು ಗುರುತಿಸಿ ಜನರಿಗೆ ತಲುಪಿಸಬೇಕೆಂದು ಹೇಳುತ್ತಿದ್ದರು. ಸುದ್ದಿ ಎಲ್ಲರಿಗೂ ಸಿಗುತ್ತದೆ, ಅದನ್ನು ವಿಶ್ಲೇಷಣೆ ಮಾಡುವ ವಿಧಾನ ಮುಖ್ಯ. ಯಾವುದೇ ಸುದ್ದಿಗೆ ವಿಜೃಂಭಣೆಯ ಚೌಕಟ್ಟು ನೀಡಿದರೆ ಪೀತ ಪತ್ರಿಕೋದ್ಯಮ ಆಗುತ್ತದೆ. ತಂದೆಯವರು ಯಾರ ಹಂಗಿಲ್ಲದೆ, ಮುಲಾಜಿಲ್ಲದೆ ಬರೆದವರು, ಯಾವುದೇ ಸುದ್ದಿ ಬರೆದರೂ ದ್ವೇಷಕಾರುತ್ತಿರಲಿಲ್ಲ. ತಪ್ಪನ್ನಷ್ಟೇ ಎತ್ತಿ ತೋರಿಸುತ್ತಿದ್ದರೆಂದರು.

ಸರ್ಕಾರಿ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಉಪನ್ಯಾಸಕಿ ಭವ್ಯಾ ನವೀನ್ ಅವರ ಪತ್ರಿಕೋದ್ಯಮ ವಿದ್ಯಾರ್ಥಿಗಳು ಲೇಖಕರಾಗಬೇಕೆಂದರೆ ಯಾವ ಮಾನದಂಡ ಪಾಲಿಸಲಾಗುತ್ತದೆಂಬ ಪ್ರಶ್ನೆಗೆ ಉತ್ತರಿಸಿದ ಭಾವನಾ ಅವರು, ಓ ಮನಸೇ ಪತ್ರಿಕೆಗೆ ನಾವೇ ವಿಷಯ ಕೊಟ್ಟು ಲೇಖನಗಳನ್ನು ಆಹ್ವಾನಿಸುತ್ತೇವೆ. ತಲುಪಿದ ಲೇಖನಗಳನ್ನು ಓದಿದ ಬಳಿಕ ಬರಹಗಾರರ ಸಾಮರ್ಥ್ಯ ನಮಗೆ ಗೊತ್ತಾಗುತ್ತದೆ. ನಂತರ ಅದಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುತ್ತೇವೆ ಎಂದರು.

ಬರವಣಿಗೆ ಎನ್ನುವುದು ತಪಸ್ಸು ಇದ್ದ ಹಾಗೆ. ಯಾವುದೋ ಸಂದರ್ಭದಲ್ಲಿ ಏನಾದರೂ ಹೊಳೆದಾಗ ತಕ್ಷಣ ಬರೆದಿಟ್ಟುಕೊಳ್ಳಬೇಕು. ಬರವಣಿಗೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. 2006ರ ನನ್ನ ಬರವಣಿಗೆಯನ್ನು ಈಗ ನೋಡಿದರೆ ಬಾಲಿಶ ಎನಿಸುತ್ತದೆ. ಲೇಖಕರಾಗಲು ಬಯಸುವವರು ಆರಂಭದಲ್ಲಿ ಕಿರುಕಥೆಗಳನ್ನು ಬರೆಯುವುದನ್ನು ಕಲಿಯಬೇಕು. ಕಿರುಕಥೆ ಬರೆದು ಗೆದ್ದರೆ ನಿಮ್ಮಂತಹ ದೊಡ್ಡ ಬರಹಗಾರ ಮತ್ತೊಬ್ಬರಿಲ್ಲ ಎಂದರು.

ರವಿ ಬೆಳಗೆರೆ ಅವರು ಕನ್ನಡ ಪತ್ರಿಕೋದ್ಯಮ ವ್ಯಾಕರಣ ಹದಗೆಡಿಸಿದರು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಓದುಗರನ್ನು ಹಿಡಿದಿಟ್ಟುಕೊಳ್ಳಲು ಮೊನಚಾದ ಭಾಷೆ ಬಳಸುವುದು ಅವರಿಗೆ ಕರಗತವಾಗಿತ್ತು. ಅದನ್ನು ತಪ್ಪು ಎಂದು ಹೇಳುವುದಿಲ್ಲ. ಪತ್ರಿಕೋದ್ಯಮ ಉದ್ಯಮ ಆಗಬಾರದು, ವಸೂಲಿಗಾಗಿ ಪತ್ರಿಕೆ ಆರಂಭಿಸುವುದು ಕೆಟ್ಟ ಸಂಸ್ಕೃತಿ, ಖಂಡನೀಯ ಎಂದರು.

ಕೆಯುಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ರವಿ ಬೆಳಗೆರೆ ಅವರು ಎಲ್ಲ ಸ್ಥರದಲ್ಲಿ ದೊಡ್ಡವರಾದರೂ ಕಿರಿಯರ ಬಗ್ಗೆ ಪ್ರೀತಿ ಹೊಂದಿದ್ದರು. ಹಾಸನದಲ್ಲಿ ರಚನೆಯಾದ ಜನಸ್ಪಂದನ ವೇದಿಕೆಯ ಕಾರ್ಯಕ್ರಮಕ್ಕೆ ರವಿ ಬೆಳಗೆರೆ ಅತಿಥಿಯಾಗಿ ಬಂದಿದ್ದರು. ಕನ್ನಡ ಪತ್ರಿಕೋದ್ಯಮದಲ್ಲಿ ಅವರು ಅಚ್ಚಳಿಯದ ಸಾಧನೆ ಮಾಡಿದ್ದಾರೆ ಎಂದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಸಾಂಸ್ಕೃತಿಕ ಸಮಿತಿ ನಡೆಸುತ್ತಿರುವ ಏಳನೇ ಕಾರ್ಯಕ್ರಮ ಇದಾಗಿದೆ. ಸಮಿತಿಯ ಎಲ್ಲಾ ಪದಾಧಿಕಾರಿಗಳು ಉತ್ತಮ ಕೆಲಸ ಮಾಡುತ್ತಿದ್ದಾರೆ. ಇದರಿಂದ ಪತ್ರಿಕೋದ್ಯಮ ವೃತ್ತಿಗೆ ಪೂರಕ ಮಾರ್ಗದರ್ಶನ ಸಿಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರವಿ ಬೆಳಗೆರೆ ಅವರಿಗೂ ಹಾಸನಕ್ಕೂ ಅವಿನಾಭಾವ ನಂಟಿದೆ. ಉಪನ್ಯಾಸಕರಾಗಿ ಕೆಲವು ವರ್ಷ ಕೆಲಸ ಮಾಡಿದ್ದ ಅವರು ಜನಮಿತ್ರ ಪತ್ರಿಕೆಯಲ್ಲೂ ಸೇವೆ ಸಲ್ಲಿಸಿದ್ದಾರೆ. ಕೇವಲ 300 ರೂ.ಗಳೊಂದಿಗೆ ಬೆಂಗಳೂರಿಗೆ ಬಂದ ಅವರು ನಾಡು ಮೆಚ್ಚಿದ ಲೇಖಕ ಆಗಿದ್ದು ರೋಚಕ. ಈ ಸಾಧನೆಯ ಹಿಂದೆ ಸಾಕಷ್ಟು ಪರಿಶ್ರಮ, ತಾಳ್ಮೆ ಹಾಗೂ ಛಲ ಇತ್ತು ಎಂದು ವಿವರಿಸಿದರು.

ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರಸನ್ನಕುಮಾರ್ ಹಾಡ್ಲಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿ ಸದಸ್ಯ ಮಲ್ಲಿಕಾರ್ಜುನ ಕೊಚ್ಚರಗಿ ಕಾರ್ಯಕ್ರಮ ನಿರೂಪಿಸಿದರು.

ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್.ಪ್ರಮೋದ್, ಜಿಲ್ಲಾ ಉಪಾಧ್ಯಕ್ಷ ಜಿ.ಪ್ರಕಾಶ್, ಖಜಾಂಚಿ ಪ್ರಕಾಶ್ ಬೆಳವಾಡಿ ಹಾಗೂ ವಿದ್ಯಾರ್ಥಿಗಳಿದ್ದರು.

# ಸಾಮಾಜಿಕ ಚಟುವಟಿಕೆ ಮೂಲಕ ರುದ್ರಾಕ್ಷ ಫೌಂಡೇಶನ್ ಹೆಸರುವಾಸಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಭಕ್ತ ವೃಂದದ ಸಹಕಾರ ಹಾಗೂ ಸ್ಪಂದನ ಮನೋಭಾವದಿಂದ ರುದ್ರಾಕ್ಷ ಫೌಂಡೇಶನ್ ಸಮಾಜದಲ್ಲಿ ಧರ್ಮ ಜಾಗೃತಿಯನ್ನು ಜಾಗೃತಗೊಳಿಸುವ ಕಾರ್ಯ ಮಾತ್ರವಲ್ಲದೆ ಆರೋಗ್ಯ, ಶಿಕ್ಷಣ, ಪರಿಸರ ಹೀಗೆ ಸಮಾಜಮುಖಿ ಹಲವು ಚಟುವಟಿಕೆಗಳನ್ನ ಮಾಡುತ್ತಾ ಬರುತ್ತಿದೆ ಎಂದು ರುದ್ರಾಕ್ಷ ಫೌಂಡೇಶನ್ ಸಂಸ್ಥಾಪಕ ಜಯಪ್ರಕಾಶ್ ಗುರೂಜಿ ಹೇಳಿದರು.

ರುದ್ರಾಕ್ಷ ಫೌಂಡೇಶನ್ ಹಾಗೂ ವಾಸನ್ ಐ ಕೇರ್ ಆಯೋಜಿಸಿದ್ದ ಸಮಗ್ರ ಉಚಿತ ಕಣ್ಣಿನ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿ, ಮನುಷ್ಯನ ಜೀವನ ಸುಗಮವಾಗಿ ಸಾಗಬೇಕಾದರೆ ಕಣ್ಣು ಪ್ರಧಾನ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬರು ತಮ್ಮ ಕಣ್ಣುಗಳನ್ನ ಪರೀಕ್ಷಿಸಿಕೊಂಡು ತಜ್ಞ ವೈದ್ಯರು ನೀಡುವ ಸಲಹೆ ಸೂಚನೆಗಳನ್ನು ಪಾಲಿಸುವ ಮೂಲಕ ತಮ್ಮ ಕಣ್ಣುಗಳ ಬಗ್ಗೆ ಮುಂಜಾಗ್ರತೆ ವಹಿಸುವಂತೆ ಕರೆ ನೀಡಿದರು.

ನಗರಸಭೆ ಮಾಜಿ ಅಧ್ಯಕ್ಷ ಬಿ.ಎನ್. ವಿದ್ಯಾಧರ್ ಮಾತನಾಡಿ, ಆಧುನಿಕ ಜೀವನ ಶೈಲಿಗೆ ಮಾರು ಹೋಗಿರುವ ಮನುಷ್ಯ ಸದಾ ಒತ್ತಡದಲ್ಲೇ ಕಾರ್ಯ ನಿರ್ವಹಿಸುತ್ತಿರುವುದರಿಂದ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುತ್ತಿದ್ದು ತೀವ್ರ ಕಳವಳದ ಸಂಗತಿಯಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಉತ್ತಮ ಚಿಕಿತ್ಸೆ ಎಂಬುದು ಶ್ರೀಮಂತರಿಗೆ ಮಾತ್ರ ಎಂಬ ಭಾವನೆ ಸಮಾಜದಲ್ಲಿದ್ದು ಇದು ವಾಸ್ತವ. ಆದರೆ ರುದ್ರಾಕ್ಷ ಫೌಂಡೇಶನ್ ಸೇರಿದಂತೆ ನಾನಾ ಮಠಗಳು ಹಾಗೂ ಸಮಾಜಮುಖಿ ಸಂಘ ಸಂಸ್ಥೆಗಳು ಈ ರೀತಿ ಉಚಿತವಾಗಿ ಆಯೋಜಿಸುವ ಆರೋಗ್ಯ ತಪಾಸಣಾ ಶಿಬಿರಗಳನ್ನು ಬಡ ಮತ್ತು ಮಧ್ಯಮ ವರ್ಗದ ಜನತೆ ಬಳಸಿಕೊಂಡು ಆರೋಗ್ಯದ ಬಗ್ಗೆ ಜಾಗೃತಿ ವಹಿಸುವಂತೆ ಕಿವಿಮಾತು ಹೇಳಿದರು. ಶಿಬಿರದಲ್ಲಿ ನೂರಾರು ಮಂದಿ ಪಾಲ್ಗೊಂಡು ತಮ್ಮ ಕಣ್ಣುಗಳನ್ನ ತಪಾಸಣೆ ಮಾಡಿಸಿಕೊಂಡು ವೈದ್ಯರು ನೀಡಿದ ಸಲಹೆ ಸೂಚನೆ ಪಡೆದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ ಆನಂದ್, ನಿರ್ದೇಶಕ ವಿಜಯಕುಮಾರ್, ಕರ್ನಾಟಕ ರಕ್ಷಣಾ ವೇದಿಕೆ ಮುಖಂಡ ರವಿಶಂಕರ್, ಸಮರ್ಪಣ ತಂಡದ ಅಧ್ಯಕ್ಷೆ ವನಜಾಕ್ಷಿ, ಕಾರ್ಯದರ್ಶಿ ಲತಾ, ಸುಮಾ, ಮಂಜುಳ, ಸುಧಾ, ಶ್ರೀಯಾ ಇತರರಿದ್ದರು.

# ಕಾಡಾನೆ ದಾಳಿ: ಮೃತ ರೈತನ ಕುಟುಂಬಸ್ಥರಿಗೆ ಸಾಂತ್ವನ

## ಶಾಸಕ ಹೆಚ್.ಕೆ.ಸುರೇಶ್, ಸಂಸದ ಶ್ರೇಯಸ್ ಭೇಟಿ | ಪ್ರತಿಭಟನೆ ವಾಪಸ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಕಾಡಾನೆ ದಾಳಿಯಿಂದ ಮೃತಪಟ್ಟ ರೈತ ಧರ್ಮರಾಜು ಅವರ ಕುಟುಂಬಕ್ಕೆ ಸಂಸದ ಶ್ರೇಯಸ್ ಪಟೇಲ್ ಹಾಗೂ ಶಾಸಕ ಹೆಚ್.ಕೆ.ಸುರೇಶ್ ಸಾಂತ್ವನ ಹೇಳಿದರು.

ಬೇಲೂರು ತಾಲೂಕಿನ ಅರೇಹಳ್ಳಿ ಹೋಬಳಿಯ ಕಣಗುಪ್ಪೆ ಗ್ರಾಮಕ್ಕೆ ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ಭೇಟಿ ನೀಡಿದ ಸಂಸದರು, ಧರ್ಮರಾಜು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ನೊಂದ ಕುಟುಂಬಸ್ಥರಿಗೆ ಧೈರ್ಯ ತುಂಬಿದರು. ಬಳಿಕ ಕುಟುಂಬ ಸದಸ್ಯರೊಂದಿಗೆ ಮಾತುಕತೆ ನಡೆಸಿ ಘಟನೆಯ ಕುರಿತು ಮಾಹಿತಿ ಪಡೆದರು. ಇದೇ ವೇಳೆ ಗ್ರಾಮಸ್ಥರು ಹಾಗೂ ಕೂಲಿ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು.

ಕಣಗುಪ್ಪೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜನರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ ಎಂದು ಗ್ರಾಮಸ್ಥರು ಸಂಸದರ ಗಮನಕ್ಕೆ ತಂದರು. ಕಾಡಾನೆಗಳು ತೋಟ, ಗದ್ದೆ ಹಾಗೂ ಜನವಸತಿ ಪ್ರದೇಶಗಳಿಗೆ ನುಗ್ಗಿ ಬೆಳೆ ನಾಶಪಡಿಸುವುದಲ್ಲದೆ, ಮಾನವ ಜೀವಕ್ಕೂ ಅಪಾಯ ಉಂಟುಮಾಡುತ್ತಿವೆ ಎಂದು ದೂರಿದರು.

ಈ ವೇಳೆ ಕೂಲಿ ಕಾರ್ಮಿಕರು ತಮ್ಮ ಸಂಕಷ್ಟವನ್ನು ಮನದಾಳದಿಂದ ಹಂಚಿಕೊಂಡರು.

ಕಾಡಾನೆಗಳ ಓಡಾಟ ಇರುವುದರಿಂದ ಕೆಲಸಕ್ಕೆ ಹೋಗಬೇಡಿ ಎಂದು ಅರಣ್ಯ ಇಲಾಖೆಯವರು ಹೇಳುತ್ತಾರೆ. ಆದರೆ ಕೆಲಸಕ್ಕೆ ರಜೆ ಮಾಡಿದರೆ ನಮ್ಮ ಕುಟುಂಬವನ್ನು ಹೇಗೆ ನಡೆಸಬೇಕು. ಸಂಘಗಳ ಮೂಲಕ ಪಡೆದ ಸಾಲಗಳ ಕಂತುಗಳನ್ನು ಹೇಗೆ ಕಟ್ಟಬೇಕು. ದಿನಗೂಲಿ ಕೆಲಸವನ್ನೇ ನಂಬಿಕೊಂಡಿರುವ ನಮಗೆ ಕೂಲಿ ಕೆಲಸ ಬಿಟ್ಟರೆ ಬೇರೆ ಆದಾಯದ ಮೂಲವಿಲ್ಲ ಎಂದು ಕಾರ್ಮಿಕರು ಅಳಲು ತೋಡಿಕೊಂಡರು.

ಕಾಡಾನೆಗಳ ಹಾವಳಿಗೆ ತಾತ್ಕಾಲಿಕ ಕ್ರಮಗಳ ಬದಲಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಸಂಸದರಿಗೆ ಮನವಿ ಮಾಡಿದರು. ಕಾಡಾನೆಗಳನ್ನು ಸೂಕ್ತ ಪ್ರದೇಶಗಳಿಗೆ ಸ್ಥಳಾಂತರಿಸುವುದು, ಅರಣ್ಯ ಪ್ರದೇಶದ ಗಡಿ ಭಾಗದಲ್ಲಿ ಪರಿಣಾಮಕಾರಿ ತಡೆ ವ್ಯವಸ್ಥೆ ನಿರ್ಮಿಸುವುದು ಹಾಗೂ ಜನರ ಜೀವ ಮತ್ತು ಆಸ್ತಿಪಾಸ್ತಿಗೆ ರಕ್ಷಣೆ ಒದಗಿಸುವಂತೆ ಆಗ್ರಹಿಸಿದರು.

ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಸಂಸದ ಶ್ರೇಯಸ್ ಪಟೇಲ್, ಕಾಡಾನೆ ಸಮಸ್ಯೆಯ ಗಂಭೀರತೆಯನ್ನು ಅರಿತಿದ್ದು, ಈ ಕುರಿತು ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು. ಕಾಡಾನೆಗಳನ್ನು ಸ್ಥಳಾಂತರಿಸುವ ಕಾರ್ಯಕ್ಕೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಹೆಚ್.ಕೆ. ಸುರೇಶ್, ರೈತನ ಸಾವಿಗೆ ಸಂತಾಪ ಸೂಚಿಸಿ, ಮೊದಲು ಅಂತ್ಯಕ್ರಿಯೆ ನೆರವೇರಿಸೋಣ. ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರಕ್ಕಾಗಿ ರೈತ ಸಂಘಟನೆಗಳು, ಕಾಫಿ ಬೆಳೆಗಾರರು ಹಾಗೂ ಜನಪ್ರತಿನಿಧಿಗಳೊಂದಿಗೆ ಸರ್ಕಾರದ ಮಟ್ಟದಲ್ಲಿ ಬಲವಾದ ಹೋರಾಟ ನಡೆಸೋಣ ಎಂದು ಮನವಿ ಮಾಡಿದರು. ಅವರ ಮನವಿಗೆ ಸ್ಪಂದಿಸಿದ ಗ್ರಾಮಸ್ಥರು ಪ್ರತಿಭಟನೆ ಹಿಂತೆಗೆದು ಅಂತ್ಯಸಂಸ್ಕಾರಕ್ಕೆ ಸಹಕರಿಸಿದರು.

ಮುಖಂಡರಾದ ಎಚ್.ಡಿ. ತುಳಸಿದಾಸ್, ವೀರಭದ್ರಶೆಟ್ಟಿ, ಎ.ಕೆ. ಮಂಜುನಾಥ್, ತೇಜೇಶ್, ಅರಣ್ಯಾಧಿಕಾರಿ ಯತೀಶ್ ಹಾಗೂ ಇತರರು ಉಪಸ್ಥಿತರಿದ್ದರು.

# ಗುರುವೇ ಬದುಕಿನ ದಾರಿದೀಪ, ಶಿಷ್ಯನ ಯಶಸ್ಸಿನ ಅಡಿಗಲ್ಲು!

ಗುರು ಬ್ರಹ್ಮಾ, ಗುರು ವಿಷ್ಣು, ಗುರು ದೇವೋ ಮಹೇಶ್ವರಃ ಎಂಬ ಶ್ಲೋಕವು ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಸ್ಥಾನಮಾನವನ್ನು ಸಾರುತ್ತದೆ. ಆಷಾಢ ಮಾಸದ ಪೂರ್ಣಿಮೆಯಂದು ಆಚರಿಸಲಾಗುವ ಗುರು ಪೂರ್ಣಿಮೆ ಕೇವಲ ಒಂದು ಹಬ್ಬವಲ್ಲ; ನಮ್ಮ ಜೀವನಕ್ಕೆ ಜ್ಞಾನ, ಮೌಲ್ಯಗಳು ಮತ್ತು ಸನ್ಮಾರ್ಗವನ್ನು ನೀಡಿದ ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಪವಿತ್ರ ದಿನವಾಗಿದೆ. ವೇದಗಳನ್ನು ಸಂಗ್ರಹಿಸಿ, ಮಹಾಭಾರತ ಸೇರಿದಂತೆ ಅನೇಕ ಅಮೂಲ್ಯ ಗ್ರಂಥಗಳನ್ನು ರಚಿಸಿದ ವೇದವ್ಯಾಸ ಮಹರ್ಷಿ ಅವರ ಸ್ಮರಣಾರ್ಥ ಈ ದಿನವನ್ನು ವ್ಯಾಸ ಪೂರ್ಣಿಮೆ ಎಂದೂ ಆಚರಿಸಲಾಗುತ್ತದೆ. ಭಾರತದ ಇತಿಹಾಸದಲ್ಲಿ ಗುರು-ಶಿಷ್ಯರ ಸಂಬಂಧವೇ ಮಹಾನ್ ವ್ಯಕ್ತಿತ್ವಗಳನ್ನು ರೂಪಿಸಿದೆ. ಸಾಂದೀಪನಿ ಮುನಿಗಳ ಮಾರ್ಗದರ್ಶನದಲ್ಲಿ ಶ್ರೀಕೃಷ್ಣ ಜ್ಞಾನ, ವಿನಯ ಮತ್ತು ಧರ್ಮದ ಆದರ್ಶವಾಗಿ ಬೆಳೆದರು. ದ್ರೋಣಾಚಾರ್ಯರ ಶಿಷ್ಯನಾದ ಅರ್ಜುನ ತನ್ನ ಏಕಾಗ್ರತೆ ಮತ್ತು ಪರಿಶ್ರಮದಿಂದ ವಿಶ್ವವಿಖ್ಯಾತ ಧನುರ್ಧಾರಿಯಾದನು. ಚಾಣಕ್ಯರ ದೂರದೃಷ್ಟಿ ಮತ್ತು ಮಾರ್ಗದರ್ಶನದಿಂದ ಚಂದ್ರಗುಪ್ತ ಮೌರ್ಯ ಭಾರತದ ಪ್ರಬಲ ಸಾಮ್ರಾಟನಾದನು. ಮಧ್ಯಯುಗದಲ್ಲೂ ಗುರು-ಶಿಷ್ಯರ ಪರಂಪರೆ ಭಾರತದ ಆತ್ಮವನ್ನು ಶ್ರೀಮಂತಗೊಳಿಸಿತು. ಸಮರ್ಥ ರಾಮದಾಸರು ನೀಡಿದ ಧೈರ್ಯ, ಧರ್ಮ ಮತ್ತು ರಾಷ್ಟ್ರಭಕ್ತಿಯ ಬೋಧನೆಗಳು ಛತ್ರಪತಿ ಶಿವಾಜಿ ಮಹಾರಾಜರ ಆದರ್ಶ ಆಡಳಿತಕ್ಕೆ ಬಲವಾದ ಅಡಿಪಾಯವಾದವು. ಆಧುನಿಕ ಯುಗದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ರೂಪಿಸಿದ ಸ್ವಾಮಿ ವಿವೇಕಾನಂದರು ಭಾರತದ ಆಧ್ಯಾತ್ಮಿಕ ಸಂದೇಶವನ್ನು ವಿಶ್ವದಾದ್ಯಂತ ಪಸರಿಸಿ ಯುವಜನತೆಗೆ ಸ್ಫೂರ್ತಿಯಾಗಿದರು. ಇಂದಿನ ಭಾರತದಲ್ಲಿಯೂ ಗುರುಗಳ ಪ್ರಭಾವ ಅಷ್ಟೇ ಮಹತ್ವದ್ದಾಗಿದೆ. ಭಾರತದ ಮಿಸೈಲ್ ಮ್ಯಾನ್ ಎಂದು ಹೆಸರಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ತಮ್ಮ ಯಶಸ್ಸಿನ ಹಿಂದೆ ತಮ್ಮ ಶಾಲಾ ಶಿಕ್ಷಕರಾದ ಶಿವಸುಬ್ರಮಣ್ಯ ಅಯ್ಯರ್ ಅವರ ಪ್ರೇರಣೆಯೇ ಪ್ರಮುಖ ಕಾರಣ ಎಂದು ಹಲವು ಬಾರಿ ಸ್ಮರಿಸಿದ್ದಾರೆ. ಹಾಗೆಯೇ ಸಂಗೀತ, ಕ್ರೀಡೆ, ವಿಜ್ಞಾನ, ಸಾಹಿತ್ಯ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ವಿಶ್ವಮಟ್ಟದ ಸಾಧನೆ ಮಾಡಿದ ಅನೇಕರು ತಮ್ಮ ಗುರುಗಳ ಮಾರ್ಗದರ್ಶನವನ್ನೇ ಯಶಸ್ಸಿನ ಮೂಲ ಎಂದು ಗೌರವದಿಂದ ಹೇಳುತ್ತಾರೆ.

ಇಂದಿನ ಕಾಲದಲ್ಲಿ ಗುರು ಎಂದರೆ ಕೇವಲ ಶಾಲೆಯ ಶಿಕ್ಷಕರಲ್ಲ. ತಂದೆ-ತಾಯಿ, ಹಿರಿಯರು, ತರಬೇತುದಾರರು, ಸಂಶೋಧನಾ ಮಾರ್ಗದರ್ಶಕರು, ಆಧ್ಯಾತ್ಮಿಕ ಗುರುಗಳು ಹಾಗೂ ಬದುಕಿನ ಮೌಲ್ಯಗಳನ್ನು ಕಲಿಸುವ ಪ್ರತಿಯೊಬ್ಬರೂ ನಮ್ಮ ಗುರುಗಳೇ. ಅವರ ಅನುಭವ ಮತ್ತು ಪ್ರೇರಣೆಯೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈ ಗುರು ಪೂರ್ಣಿಮೆಯಂದು ನಮ್ಮ ಬದುಕಿಗೆ ಬೆಳಕು ನೀಡಿದ ಪ್ರತಿಯೊಬ್ಬ ಗುರುವನ್ನೂ ಸ್ಮರಿಸಿ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡೋಣ. ಒಬ್ಬ ಉತ್ತಮ ಗುರು ಕೇವಲ ಪಾಠವನ್ನು ಕಲಿಸುವುದಿಲ್ಲ; ವ್ಯಕ್ತಿತ್ವವನ್ನು ರೂಪಿಸುತ್ತಾರೆ, ಕನಸುಗಳಿಗೆ ದಿಕ್ಕು ತೋರಿಸುತ್ತಾರೆ ಮತ್ತು ಸಮಾಜಕ್ಕೆ ಆದರ್ಶ ನಾಗರಿಕರನ್ನು ನೀಡುತ್ತಾರೆ. ಇದೇ ಗುರು ಪೂರ್ಣಿಮೆಯ ನಿಜವಾದ ಸಂದೇಶ.



**– ಅಂತೋಣಿ ಮುತ್ತು ವಿ.**
**ಶಿಕ್ಷಕರು 7259675543**

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-02

1776: ಅಮೆರಿಕದ ಸ್ವಾತಂತ್ರ್ಯ ಘೋಷಣೆಗೆ ಸಹಿ ಹಾಕುವ ಪ್ರಕ್ರಿಯೆ ಆರಂಭವಾಯಿತು.

1934: ಜರ್ಮನಿಯ ಅಧ್ಯಕ್ಷ ಪಾಲ್ ವಾನ್ ಹಿಂಡೆನ್‌ಬರ್ಗ್ ನಿಧನರಾದ ನಂತರ ಅಡಾಲ್ಫ್ ಹಿಟ್ಲರ್ ಅಧ್ಯಕ್ಷ ಮತ್ತು ಚಾನ್ಸಲರ್ ಹುದ್ದೆಗಳನ್ನು ಒಗ್ಗೂಡಿಸಿಕೊಂಡು ದೇಶದ ಸಂಪೂರ್ಣ ಅಧಿಕಾರ ವಹಿಸಿಕೊಂಡರು.

1990: ಇರಾಕ್ ಕುವೈತ್ ಮೇಲೆ ಆಕ್ರಮಣ ನಡೆಸಿತು. ಈ ಘಟನೆಯು ಗಲ್ಫ್ ಯುದ್ಧಕ್ಕೆ ನಾಂದಿ ಹಾಡಿತು.

### ಜನನ

1861: ಪ್ರಭಾತ್ ಕುಮಾರ್ ಮುಖೋಪಾಧ್ಯಾಯ, ಬಂಗಾಳಿ ಲೇಖಕ

1924: ಜೇಮ್ಸ್ ಬಾಲ್ಡಿನ್, ಅಮೆರಿಕದ ಲೇಖಕ ಮತ್ತು ಸಾಮಾಜಿಕ ಹೋರಾಟಗಾರ

### ನಿಧನ

1922: ಅಲೆಕ್ಸಾಂಡರ್ ಗ್ರಹಾಂ ಬೆಲ್, ದೂರವಾಣಿಯ ಸಂಶೋಧಕರಲ್ಲಿ ಪ್ರಮುಖರು

1980: ಮೊಹಮ್ಮದ್ ರಫಿ, ಭಾರತದ ಖ್ಯಾತ ಹಿನ್ನೆಲೆ ಗಾಯಕ

1997: ವಿಲಿಯಂ ಎಸ್. ಬರೋಸ್, ಅಮೆರಿಕದ ಲೇಖಕ

# ಲಲಿತಾ-5

**– ಧನಂಜಯ ಜೀವಾಳ ಬಿ.ಕೆ.**

ಇನ್ನೂ ಕಾಲೇಜು ಪ್ರಾರಂಭವಾಗದ್ದರಿಂದ ಬೆಳಿಗ್ಗೆ ನೀರು ತರುವುದರಿಂದ ಹಿಡಿದು, ಯಮಹಾ ಬೈಕಿನಲ್ಲಿ ಎತ್ತಿನಹೊಳೆಯ ಶಾಲೆಗೆ ಹೋಗುವುದು, ಕೆಲ ಸಂಜೆಯ ವಾಯು ವಿಹಾರ, ಸಂಜೆ ಪಕ್ಕದ ಬಯಲಿನಲಿ ಕ್ರಿಕೆಟ್ ಆಡುತಿದ್ದ ಈ ಗಿರೀಶ್ಮೇಷ್ಟ್ರನ್ನ ಮನೆಯ ಮಹಡಿಯ ಮೇಲಿನ ಎರಡು ಕಿಟಕಿಯ ಮೂಲಕ ಎವೆಯಿಕ್ಕದೇ ದಿಟ್ಟಿಸುತಿದ್ದ ಲಲಿತ ಮನಸ್ಸಲ್ಲೇ ನಿರ್ಧಾರ ಮಾಡಿಬಿಟ್ಟಿದ್ದಳು. ಅದೇನಾದರೂ ಆಗಲಿ ಮದುವೆ ಅಂತ ಆದರೆ ಇವನನ್ನೇ ಎಂದು ತನ್ನ ಗೆಳತಿಯರಲ್ಲಷ್ಟೇ ಅಲ್ಲ ತನ್ನ ನೆರೆಯ ಮನೆಯಲ್ಲಿದ್ದ ಕಾಂತಿ ಆಂಟಿಯ ಬಳಿಯೂ ಬಾಯಿಬಿಟ್ಟೇ ಹೇಳಿದ್ದಳು.

ಈ ಗಿರೀಶ್ಮೇಷ್ಟ್ರು ಏನೂ ಮುಗ್ಧನಲ್ಲ. ಆದರೆ ತನ್ನ ಹುದ್ದೆ, ಜವಾಬ್ದಾರಿ ಹಾಗೂ ಆ ಊರಿನ ಜನರು ಅವನಲ್ಲಿ ಇಟ್ಟಿದ್ದ ಪ್ರೀತಿ-ವಿಶ್ವಾಸವನ್ನು ಎಲ್ಲಿ ಕಳೆದುಕೊಳ್ಳುವೆನೋ ಎಂಬ ಆತಂಕದಿಂದ ಲಲಿತ ತನ್ನೆಡೆಗೆ ತೋರುತಿದ್ದ ಆಸಕ್ತಿಯನ್ನು ಗಮನಿಸಿಯೂ ಗಮನಿಸದಂತೆ ಮನಸ್ಸೊಳಗೇ ಮಂಡಿಗೆ ತಿನ್ನುತಿದ್ದ. ತೆಳ್ಳಗೆ, ಬೆಳ್ಳಗೆ ಹಾಗೂ ಇದ್ದುದರಲ್ಲಿ ಬುದ್ಧಿವಂತಳೂ ಆಗಿದ್ದ ಜೊತೆಗೆ ಅನುಕೂಲಸ್ಥ ಮನೆಯ ಹಿನ್ನೆಲೆಯೂ ಇದ್ದ ಲಲಿತಳಿಗೆ ಅವಳ ವಯಸ್ಸಿನವರೇ ಆದ ಕೆಲ ತುಡುಗರು ಲೈಟ್ಟಾಗಿ ಲೈನು ಹೊಡೆಯುತಿದ್ದರು. ಅವರೆಡೆಗೆ ಯಾವುದೇ ಪ್ರತಿಕ್ರಿಯೆ ತೋರದೇ, ಮತ್ತಷ್ಟು ನಿರ್ಲಕ್ಷ್ಯ ತೋರುತ್ತಾ, ಆ ಹುಡುಗರನ್ನು ಮತ್ತಷ್ಟು ವ್ಯಗ್ರಗೊಳಿಸುತ್ತಾ ವಯೋಸಹಜವಾಗಿ ಆಕೆಯೂ ಆ ಲೈನನ್ನು ಎಂಜಾಯ್ ಮಾಡುತಿದ್ದಳು.

ಸಾವಿರಾರು ಮರಗಳನ್ನ ಕಡೀತಾರಂತೆ ಈ ರಸ್ತೆಗಾಗಿ, ಎಂಬುದನ್ನು ತಿಳಿದೇ ಆ ಹೈಸ್ಕೂಲು ಮಕ್ಕಳು ವಿಹ್ವಲರಾಗಿದ್ದರು. ಮಕ್ಕಳಲ್ಲೂ ಈ ರೀತಿಯ ಜಾಗೃತಿ, ಪರಿಸರಸ್ನೇಹಿ ಪ್ರಜ್ಞೆ ಬರಲಿಕ್ಕೆ ಕಾರಣ ಕವಿತಾ ಮೇಡಂ. ಸಹೋದ್ಯೋಗಿಗಳು, ಹೆಡ್ಮಾಸ್ಟ್ರಾದಿಯಾಗಿ ಎಲ್ಲರೊಡನೆಯೂ ಕುಸ್ತಿಯಾಡಿ, ಶಾಲೆ ಸುತ್ತಲೂ ಒಂದು ಮಿನಿ ಕಾಡನ್ನೇ ಸೃಷ್ಟಿಸಿದ್ದ ಇವರು ಸಕಲ ಜೀವಿಗಳಿಗೂ ನೆರಳು, ನೀರು, ತಂಪು ಗಾಳಿ, ಆಶ್ರಯ ನೀಡುವ ಮರಗಳನ್ನು ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸಲು ಪಣತೊಟ್ಟಿದ್ದರು. ತಮ್ಮ ಶಾಲೆಯ ಮಕ್ಕಳಲ್ಲದೇ ತಮ್ಮಂತೆಯೇ ಪ್ರಕೃತಿಯೆಡೆಗೆ ಒಲವಿರುವ ಇತರೇ ಶಾಲೆಗಳ ಶಿಕ್ಷಕರ ಬಾಂಧವ್ಯದಿಂದ ಪ್ರತೀ ಶಾಲೆಗಳಲ್ಲೂ ಎಕೋ ಕ್ಲಬ್‌ಗಳು ಪ್ರಾರಂಭವಾಗುವಂತೆ ಪ್ರೇರಣೆ ನೀಡಿ ಆ ಭಾಗದ ಎಲ್ಲಾ ಶಾಲೆಗಳಲ್ಲೂ ಉದ್ದೇಶಿತ ರಸ್ತೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಸಿನೆಮಾ, ಕ್ರಿಕೆಟ್ಟು, ಎಕ್ಸಾಮುಗಳ ಬಗ್ಗೆ ಮಾತ್ರ ಮಾತನಾಡುತಿದ್ದ ಮಕ್ಕಳು ಈಗ ಕಾಡು, ಜೀವಜಾಲ, ನಿಸರ್ಗ ಸಮತೋಲನ, ನದಿ, ಪಕ್ಷಿ ಮುಂತಾದವುಗಳ ಬಗ್ಗೆ ಮಾತನಾಡಲಾರಂಭಿಸಿದ್ದು ಪೋಷಕರಲ್ಲಿ ಸಂತಸ ಮೂಡಲು ಕಾರಣವಾಗಿತ್ತು.

ಹೊಸ ಅಲೆಯ, ವಿನೂತನ ಚಿಂತನೆಯ ಹಾಗೂ ಶಿಕ್ಷಕ ಹುದ್ದೆಯ ಮೌಲ್ಯ ಮತ್ತು ಸಾಧ್ಯತೆಯ ಅಗಾಧತೆಯ ಅರಿವಿದ್ದ ಒಂದಷ್ಟು ಯುವಕ ಯುವತಿಯರು ಇತ್ತೀಚೆಗೆ ಹಳ್ಳಿಹಳ್ಳಿಗಳ ಶಾಲೆಗಳಿಗೆ ಉದ್ಯೋಗ ನಿಮಿತ್ತ ಸೇರಿದ್ದರು. ಅವರಲ್ಲಿ ಎತ್ತಿನಹೊಳೆಯ ಈ ಶಾಲೆಯ ಗಿರೀಶ್, ಕವಿತಾ ಅಲ್ಲದೇ ಸುತ್ತಮುತ್ತಲಿನ ಊರುಗಳಲ್ಲಿನ ಶಾಲೆಗಳಲ್ಲಿ ಶಿಕ್ಷಕರಾಗಿರೋ ಪಾಲಾಕ್ಷ, ಮೋಹನ ರಾಜು, ಮಮತಾ, ನಾಗರಾಜು, ಶೈಲಜಾ, ಶ್ರೀನಿವಾಸ, ದಿಲ್ನಾರ್, ರೂಪಾ, ಲೀಲಾ ಮುಂತಾದವರಿದ್ದರು. ಹಳೇಕಲ್ಲು ಮತ್ತು ಜಾವಬೀಡಿನ ನಡುವೆ ರಸ್ತೆಯನ್ನು ವಿಸ್ತರಿಸ್ತಾರೆ ಹಾಗೂ ರಸ್ತೆಯನ್ನು ನೇರ ಮಾಡಲು ಈಗಿರುವ ರಸ್ತೆಯ ಅಕ್ಕಪಕ್ಕದ ದಿಬ್ಬಗಳನ್ನು ಕೊರೆದು ನೆಲಸಮಗೊಳಿಸುತ್ತಾರೆ ಎಂದು ತಿಳಿದ ಆ ಹದಿನೈದು ಕಿಲೋ ಮೀಟರ್ ರಸ್ತೆ ಎರಡೂ ಬದಿಯ ಮರಗಳನ್ನು ಹತ್ತಾರು ವರ್ಷಗಳಿಂದ ಯಾರೂ ಗಾಯಗೊಳಿಸದಂತೆ ಹಗಲೂ ರಾತ್ರಿ ಕಾಪಾಡಿದ್ದ ಸೌಭಾಗ್ಯಮ್ಮ ಬೆಟ್ಟ ಗುಡ್ಡಾನೆಲ್ಲ ಸವರಿ, ಕುಟ್ಟಿ ಕೆಡವಿ ಸಮಾ ಮಾಡಬೇಡ್ರೋ. ಮಿಲಿಯಾಂತರ ವರ್ಷಗಳಿಂದ ಈ ಭೂಮಿ ಮಳೆಗಾಲ, ಹಿಮಪಾತ, ಬಿಸಿಲು, ನದಿ ಹರಿವು, ಕಡಲ ಕೊರೆತ, ತಾಂತಾನೇ ಆಗುವ ಭೂಕುಸಿತ, ಪ್ರವಾಹ ಹೀಗೆ ಇಡೀ ನೈಸರ್ಗಿಕ ಪ್ರಕ್ರಿಯೆಯ ಪ್ರತಿಫಲ ಸೃಷ್ಟಿಯ ಲಕ್ಷಣವೇ ವಕ್ರತೆ. ಬೆಟ್ಟಾನ ಗೋರಿ ಹಾಕಿ ಹರಿಯೋ ತೊರೆಗೆ ಅಡ್ಡ ಕಟ್ಟಬೇಡಿ. ಕಣಿವೆ-ಕೊರಕಲನ್ನು ಸಮತಟ್ಟು ಮಾಡಲು ಎತ್ತರದ ಗುಡ್ಡಗಳನ್ನು ಜರುಗಿಸಿ ಕಂದರಗಳನ್ನು ಮುಚ್ಚಬೇಡಿ. ಭೂಮಿ ತನ್ನನ್ನು ತಾನೇ ಸರಿಮಾಡಿಕೊಳ್ಳುತ್ತಾ ಸಮತೋಲನ ಸಾಧಿಸಿಕೊಳ್ಳುತ್ತಾ ಹೋಗುತ್ತೆ ಎಂದು ತನ್ನ ಸ್ವಂತ ಮಕ್ಕಳನ್ನೇ ಬದುಕಿಸಿಕೊಳ್ಳಲು ಬೇಡಿಕೊಳ್ಳುವಂತೆ ಗೋಗರೆಯತೊಡಗಿದರು.

**ಗ್ರಾಮಾಯಣ-37**

ಪ್ರಕೃತಿಯ ನಿಯಮಕ್ಕೆ ಸ'ುಲಭ'ವಾಗಿರ'ುವ' ಉದಾಹರಣೆಯೆಂದರೆ ನಮ್ಮ ಕೈ. ಅದರಲ್ಲಿರುವ ಬೆರಳುಗಳು, ಎಲ್ಲಾ ಬೆರಳುಗಳು ಒಂದೇ ಆಕಾರ, ಗಾತ್ರ ಮತ್ತು ಅಳತೆಯಲ್ಲಿದ್ದರೆ ನಮಗೆ ಅನ್ನವನ್ನಾದರೂ ಹಿಡಿದುಕೊಳ್ಳಲು, ಏನನ್ನಾದರೂ ಬಿಗಿ ಮಾಡಲು, ಎಳೆಯಲು ಹಾಗೂ ತಿರುಗಿಸಲು ಸಾಧ್ಯವಾಗುತಿತ್ತೇ? ಹೆಬ್ಬೆರಳು ಬೆಳೆದಿರುವ ದಿಕ್ಕು, ಮಾಡುವ ಕೆಲಸ ತೋರ್ಬೆರಳ ಸಾಮರ್ಥ್ಯ ಮತ್ತದರ ಕರ್ತವ್ಯ, ಮಧ್ಯದ ಬೆರಳ ಉದ್ದ ಮತ್ತದರ ಉಪಯೋಗ, ಉಂಗುರದ ಬೆರಳ ಸಮನ್ವಯತೆ, ಕಿರು ಬೆರಳ ಸಹಕಾರ ಹೀಗೆ ಒಂದೊಂದೂ ತನ್ನದೇ ಆದ ಅನನ್ಯತೆಯಿಂದ ಮುಖ್ಯವಾಗಿವೆ. ಐದು ಬೆರಳುಗಳೂ ಸರಿಸಮನಾಗಿದ್ದರೆ, ನಮ್ಮ ಮುಖ ಗುಳಿಯಿಲ್ಲದೇ ಕಣ್ಣು, ಏರಿಲ್ಲದೇ ಹಣೆ, ಚೂಪಿಲ್ಲದೇ ಮೂಗು, ತೆರೆಯದ ಬಾಯಿ ಹೀಗೆ ಚಪ್ಪಟೆ ಸಮತಟ್ಟಾದ ತಟ್ಟೆಗೆ ಸರಿಸಮನಾಗಿರುತಿತ್ತು. ಹಾಗಾಗಿ ಪ್ರಕೃತಿಯಲ್ಲಿ ಯಾವುದೂ ನೇರವಾಗಿಲ್ಲ ಮತ್ತು ಸಮತಟ್ಟಾಗಿಲ್ಲ ಎಂಬುದನ್ನು ಅರಿಯಿರಿ ಹಾಗೂ ಅದು ಯಾಕೆಂದು ಅರ್ಥ ಮಾಡಿಕೊಳ್ಳಿ ಎಂದು ರಸ್ತೆ ಕಾಮಗಾರಿಗೆ ಅಡಿಗಲ್ಲನ್ನಿಡಲು ಬಂದಿದ್ದ ಸಚಿವ ತಿಂದೋಡಪ್ಪನವರಿಗೆ ಆ ಭಾಗದ ಪರಿಸರಾಸಕ್ತರ ಪರವಾಗಿ ಕೈಮುಗಿದು ಮನವಿ ಮಾಡಿದರು.

ಈ ರಸ್ತೆಯಲ್ಲದೇ ಅಲ್ಲಿಂದ ಹದಿನೈದು ಮೈಲು ದೂರದಲ್ಲಿ ಮಾಡಲಿರುವ ಅನಗತ್ಯ ಕಾಲುವೆ ಕಾಮಗಾರಿಗೂ ಸಹಾ ಅಲ್ಲಿಯೇ ಸಾಂಕೇತಿಕವಾಗಿ ಚಾಲನೆ ನೀಡಿದ್ದನ್ನು ಪ್ರತಿಭಟಿಸಿ, ನಮ್ಮ ಜೀವನವನ್ನು ಗೌರವಿಸಿ. ನಮ್ಮ ಬದುಕನ್ನು ಅನುಭವಿಸಲು ಬಿಡಿ. ಪ್ರಕೃತಿಯ ಅರಿಯಲು ಪ್ರಯತ್ನಿಸಿ, ನಿಸರ್ಗದ ನಿಯಮದಂತೆ ಬದುಕಲು ಕಲಿಯಿರಿ, ಹೊಸದಾಗಿ ರಸ್ತೆ ಮಾಡಲು, ಹೊಸದಾಗಿ ಕಾಲುವೆ ತೋಡಲು ಕಲ್ಲು ಕಿತ್ತು, ಮಣ್ಣು ಗೋರಲು ಶುರೂ ಮಾಡಿದಿರೋ, ನೀರಿನ ಆಕರ ವಿಚಲಿತವಾಗುತ್ತೆ, ಹಳ್ಳದ ಹರಿವು ಡಿಸ್ಟರ್ಬ್ ಆಗುತ್ತೆ. ನಿಲ್ಲಬಾರದಲ್ಲಿ ನೀರು ನಿಲ್ಲುತ್ತೆ. ಹರಿಯಬಾರದಲ್ಲಿ ನೀರು ಹರಿಯುತ್ತೆ. ಆ ನೀರಿನ ಜೊತೆ ನೆಲವೂ ಕರಗಿ ಹರಿಯುತ್ತೆ, ಒಟ್ಟಾರೆ ಭೂಮಿಯ ಸ್ವರೂಪವೇ ಮನುಷ್ಯನ ಅವಿವೇಕದಿಂದ ವಿರೂಪವಾಗುತ್ತೆ. ಈ ಭೂಮಿಗೆ ಏರು ಬೇಕಾದಲ್ಲಿ ಬೆಟ್ಟ, ತಗ್ಗು ಬೇಕಾದಲ್ಲಿ ನದಿ-ಕಮರಿಗಳು, ನೀರು ಶೇಖರವಾಗಿ ನಿಲ್ಲಲು ಕೆರೆ, ಸಮುದ್ರ, ಸಾಗರಗಳು, ನೆಲ ಬಿಸಿಯಾಗಲು ಮರುಭೂಮಿಗಳು, ಶೀತ ಕಾಪಾಡಲು ಹಿಮಪ್ರದೇಶಗಳು ಹೀಗೆ ಎಲ್ಲವನ್ನೂ ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಲ್ಲಿಯೇ ಅಗತ್ಯವಿದೆಯೆಂದೇ ಸೃಷ್ಟಿಸಿಕೊಂಡಿದೆ ಹಾಗೂ ಉಳಿಸಿಕೊಂಡಿದೆ. ನಾವಿಲ್ಲಿಗೆ ಅತಿಥಿಗಳಷ್ಟೇ, ಬದುಕಿರುವಷ್ಟು ದಿನ ಇರೋದಕ್ಕೆ ನಿಸರ್ಗದೊಂದಿಗೆ ಹೊಂದಿಕೊಂಡು ಹೋಗಬೇಕಷ್ಟೇ ಎಂದು ಪುಟ್ಟ ಭಾಷಣವನ್ನೇ ಮಾಡಿದರು, ತಾವು ಕಲಿತ ಹೋಮಿಯೋಪತಿ ವಿದ್ಯೆಯಿಂದ ಆ ಭಾಗದ ಸಾವಿರಾರು ಜನರಿಗೆ ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತಿದ್ದ ಜಯದೇವಪ್ಪ.



ಜಗತ್ತಿನೆಲ್ಲಾ ವ್ಯವಸ್ಥೆಗಳೂ ನಮಗಾಗಿಯಲ್ಲ. ಇತರೇ ಜೀವಿಗಳಂತೆ ಉದಾಹರಣೆಗೆ ವಿಶಾಲ ಬಯಲ ನಡುವಿನ ಒಂದು ಗರಿಕೆ ಹುಲ್ಲಿನ ಬದುಕಿನಂತೆ, ಸಾಗರದಲ್ಲಿನ ಯಾವುದೋ ಒಂದು ಏಡಿಯಂತೆ, ನಮ್ಮದೂ ಒಂದು ಜೀವ ಅಷ್ಟೇ ಎಂದು ಮನದಟ್ಟು ಮಾಡಿಕೊಂಡ ವಿದ್ಯಾರ್ಥಿಗಳು, ಪೋಷಕರ, ಊರಿನ ಯುವಕರ ಮತ್ತು ವಿಚಾರವಂತರ ಜೊತೆ ಚರ್ಚೆಗಿಳಿದರು. ನಾವು ಈ ಭೂಮಿ ಮೇಲೆ ನಿಮ್ಮ ನಿರ್ಗಮನದ ನಂತರವೂ ಬಾಳಿ ಬದುಕಬೇಕಾದವರು. ನೀವು ನಮ್ಮಿಂದ ಪ್ರೀತಿ, ಗೌರವ, ಆದರವನ್ನು ನಿರೀಕ್ಷಿಸುವಿರಾದರೆ, ನಮ್ಮ ರಸ್ತೆ ವಿರೋಧಿ ಮತ್ತು ಕಾಲುವೆ ವಿರೋಧಿ ಆಂದೋಲನಕ್ಕೆ ಬೇಷರತ್ ಬೆಂಬಲ ನೀಡಲೇಬೇಕೆಂದು ಆಗ್ರಹಿಸಿದರು.

ಮುಂದಿನ ಶುಕ್ರವಾರ ಮುದ್ದಿನಕೆರೆಯಲ್ಲಿ ಆಯೋಜಿಸಿರುವ ನಮ್ಮ ಕಾಡು ನಮ್ಮ ಹೆಮ್ಮೆ ಆಂದೋಲನದಲ್ಲಿ ನಮ್ಮೊಡನೆ ಪ್ಲಾಕಾರ್ಡ್ ಹಿಡಿದು ಮೆರವಣಿಗೆ ಬರಲೇಬೇಕೆಂದು ಒತ್ತಾಯಿಸತೊಡಗಿದರು. ಮೊದಮೊದಲು ಈ ಮಕ್ಕಳದ್ದೇನಿದು ಹುಡುಗಾಟಿಕೆ ಎಂದು ಉಪೇಕ್ಷೆ ಮಾಡಿದ್ದ ಹಿರಿಯರು ನಿಧಾನವಾಗಿ ಮಕ್ಕಳ ಬೇಡಿಕೆಯ ಒಳಸತ್ಯವನ್ನು ನಿಧಾನವಾಗಿ ಅರಿಯತೊಡಗಿದರು.

ಹೈಸ್ಕೂಲು ಹೆಡ್ ಮಾಸ್ತರರಾಗಿ ನಿವೃತ್ತರಾಗಿದ್ದ ಪುರುಷೋತ್ತಮರು ಹಿರಿಯರ ಮುಂದಾಳತ್ವ ಬೇಕೆಂದು ಬಂದಿದ್ದ ಮಕ್ಕಳು ಹಾಗೂ ಶಿಕ್ಷಕರನ್ನು ತಮ್ಮ ಮನೆ ಅಂಗಳದಲ್ಲಿ ಕೂರಿಸಿಕೊಂಡು ರಸ್ತೆ ಬದಿಯ ಮರ ಯಾರ ಸೊತ್ತು? ಎಂದು ಕೇಳಿದರು.

ಹೆದ್ದಾರಿ ವಿಸ್ತರಣೆ ಸಾರಿಗೆ ಸಂಪರ್ಕ ವ್ಯವಸ್ಥೆಗೆ ಅನಿವಾರ್ಯ ಅಗತ್ಯವಾಗಿದೆ. ದಶಕಗಳ ಹಿಂದಿನಿಂದ ರಸ್ತೆಯ ಎರಡೂ ಪಕ್ಕದಲ್ಲಿರುವ ಮರಗಳು ಪರಿಸರ ಸಮತೋಲನ ಕಾಪಾಡುವಲ್ಲಿ, ಅಹ್ಲಾದಕರ ನೆರಳು ನೀಡುವಲ್ಲಿ, ಪಶು-ಪಕ್ಷಿಗಳ ಆವಾಸವಾಗುವಲ್ಲಿ, ಹೆದ್ದಾರಿಯ ಅಂದ ಹೆಚ್ಚಿಸುವಲ್ಲಿ ನೀಡಿರುವ ಕೊಡುಗೆ ಅನನ್ಯ ಮತ್ತು ಅಮೂಲ್ಯವಾದುದು. ಈಗ ಅನಿವಾರ್ಯವಾಗಿರುವ ರಸ್ತೆ ಅಗಲೀಕರಣದಿಂದ ಈ ವೃಕ್ಷ ಸಂಪತ್ತು ತನ್ನ ಪ್ರಾಣತ್ಯಾಗ ಮಾಡಬೇಕಾಗಿರುವುದು ವಿಷಾದನೀಯ. ಹಾಗಾಗಿ ರಸ್ತೆ ಅಗಲೀಕರಣದ ಎರಡು ವರ್ಷ ಮುಂಚೆಯೇ ರಸ್ತೆಯುದ್ದಕ್ಕೂ ಪ್ರತೀ ಐವತ್ತು ಅಡಿಗೊಂದು ಪಶು ಪಕ್ಷಿಗಳಿಗೆ ಆಶ್ರಯ ನೀಡಬಲ್ಲಂಥ ಸ್ಥಳೀಯ ಪ್ರಭೇದದ ಮರದ ಸಸಿಗಳನ್ನು ಕಡ್ಡಾಯವಾಗಿ ನೆಟ್ಟು ಕನಿಷ್ಠ ಐದು ವರ್ಷ ಸಲಹುವ ಕರಾರನ್ನು ರಸ್ತೆ ನಿರ್ಮಾಣ ಸಂಸ್ಥೆಯೊಂದಿಗೆ ಸರ್ಕಾರ ಮಾಡಿಕೊಳ್ಳಬೇಕು.

ಇಷ್ಟು ವರ್ಷ ರಸ್ತೆ ಬದಿಯ ಸಂಪನ್ಮೂಲಗಳ ಸಹಾಯದಿಂದ ಬೆಳೆದಿರುವ ಈ ವೃಕ್ಷ ಸಮೂಹವನ್ನು ರಸ್ತೆ ವಿಸ್ತರಣಾ ಯೋಜನೆಯಡಿ ವ್ಯವಸ್ಥಿತವಾಗಿ ಲೂಟಿಹೊಡೆಯಲು ದೊಡ್ಡಮಟ್ಟದ ಲಾಬಿಯೊಂದು ಅಧಿಕಾರಿ-ವ್ಯಾಪಾರಿ ಪಾಲುದಾರಿಕೆ ಸೂತ್ರದಡಿಯಲ್ಲಿ ತಯಾರಾಗಿ ನಿಂತಿರುವಂತೆ ಕಾಣುತ್ತಿದೆ. ಇಡೀ ಸಮಾಜದ ಹಾಗೂ ಜೀವ ಮಂಡಲದ ಆಸ್ತಿಯಾಗಿರುವ ಈ ಮರಗಳ ಸದುಪಯೋಗ ಎಲ್ಲರಿಗೂ ದೊರೆಯುವಂತೆ ರಸ್ತೆಯ ಗುಂಟ ಪ್ರತೀ ಮರಗಳಿಗೆ ಗುರುತಿನ ಸಂಖ್ಯೆ ನೀಡಿ; ಪ್ರತೀ ಒಂದೊಂದು ಮರವನ್ನೂ ಈ ರೀತಿಯ ಸಂಖ್ಯೆ ಆಧರಿಸಿ ಸಾರ್ವಜನಿಕವಾಗಿ ಬಿಡ್ ಕರೆದು ಬಹಿರಂಗವಾಗಿ ವಿಲೇವಾರಿಮಾಡಬೇಕು.

ಬಿಲಿಯನ್ ಬೆಲೆಬಾಳುವ ಮರಗಳನ್ನು ಯಾರೋ ಒಬ್ಬ ಉದ್ಯಮಿ ದೊಡ್ಡ ಮೊತ್ತದ ಹಣ ನೀಡಿ ಸಗಟಾಗಿ ಖರೀದಿಸಿದಾಗ ಒಂದರಿಂದ ಎರಡು ಲಕ್ಷ ಬೆಲೆಬಾಳುವ ಒಂದೊಂದು ಮರವೂ ಕೇವಲ ಎರಡು ಮೂರು ಸಾವಿರ ರೂಪಾಯಿಗಳಿಗೆ ಬಿಕರಿಯಾಗುತ್ತದೆ. ಸಾರ್ವಜನಿಕರು ಅದೇ ಮರವನ್ನು ಕೊಳ್ಳಲು ಹೋದಾಗ ಮಾರುಕಟ್ಟೆ ದರ ಕೊಡಬೇಕು ಆದರೆ ಈ ಕಡಿಯುವ ಕಾಯಕದ ಗುತ್ತಿಗೆದಾರರು ಸೇವಾಸೌಲಭ್ಯ ನೀಡುವ ಸರದಾರರಾಗುತ್ತಾರೆ ಹಾಗೂ ಕಡಿದ ಪ್ರತಿ ಮರಕ್ಕೂ ಸಹಾ ಚಿಲ್ಲರೆ ಕಾಸು ತೆತ್ತು ಮಾಲೀಕರಾಗುತ್ತಾರೆ. ಈ ರೀತಿ ಈ ಮರಗಳನ್ನು ಕಾಪಾಡಿದ ಸಮಾಜದ ಕಟ್ಟಕಡೆಯ ಮನುಷ್ಯನ ಅಮಾಯಕತೆಯನ್ನು ಧನವಂತ ವ್ಯಾಪಾರಿಯೊಬ್ಬ ದುರುಪಯೋಗಪಡಿಸಿಕೊಂಡು, ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ರಾಜಧನ ಸಿಗುವುದನ್ನು ತಪ್ಪಿಸಲು ಸಕಲ ಸಿದ್ಧತೆಯು ತೆರೆಮರೆಯಲ್ಲಿ ನಡೆಯಲಿದೆ. ಹೆಚ್ಚು ಬಂಡವಾಳವಿಲ್ಲದ ಚಿಲ್ಲರೆ ಖರೀದಿದಾರರೂ ಸಹಾ ತಮ್ಮ ಅಗತ್ಯ ಹಾಗೂ ಸಾಮರ್ಥ್ಯಗಳಿಗನುಗುಣವಾಗಿ ಒಂದೆರಡು ಮರಗಳನ್ನು ಕೊಳ್ಳಲು ಅವಕಾಶ ಮಾಡಿಕೊಡಬೇಕಾಗಿದೆ.

ಈ ಕ್ರಮ ಕೈಗೊಳ್ಳದಿದ್ದರೆ ಸಂಬಂಧಿಸಿದ ಅಧಿಕಾರಿಗಳು ಸರ್ಕಾರದ ಖಜಾನೆಗೆ ನಷ್ಟ ಮಾಡುವುದರ ಜೊತೆಗೆ ಉದ್ಯಮಿಗಳಿಗೆ ಲಾಭ ಮಾಡಿಕೊಡಲಿಕ್ಕಾಗಿ ಸಗಟು ಮಾರಾಟ ಮಾಡಿಕೊಡಲು ಹಾದಿ ಸುಗಮ ಮಾಡಿಕೊಟ್ಟಿದ್ದಾರೆಂದೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಹತ್ತಾರು ವರ್ಷಗಳಿಂದ ಈ ಮರಗಳನ್ನು ಸಾಕಿ ಸಲಹಿದ ಜನಸಾಮಾನ್ಯರುಗಳಿಗೆ ಈ ಮರಗಳ ಅಂತಿಮ ಪ್ರಯೋಜನವನ್ನು ಪಡೆಯಲು ನಿರಾಕರಿಸುವ ಮೂಲಕ ಮಾನವ ಹಕ್ಕುಗಳಿಗೆ ಧಕ್ಕೆ ಉಂಟುಮಾಡಿರುವರೆಂದು ವೇದ್ಯವಾಗುತ್ತದೆ. ಈ ರೀತಿ ಚಿಲ್ಲರೆ ವಿಲೇವಾರಿಗೆ ಕಾನೂನಿನ ಪ್ರಕಾರ ನೀತಿನಿಯಮಗಳಲ್ಲಿ ಅವಕಾಶವಿಲ್ಲವೆಂದು ಕಾರಣ ಹೇಳುವುದಾದರೆ, ನಮ್ಮ ಕಾನೂನು ಕಟ್ಟಳೆಗಳು ಇಡೀ ಸಮಾಜದ ಒಳಿತಿಗೇ ಇರಬೇಕಾದ್ದೆಂದು ಪರಿಗಣಿಸಿ ಆ ನೀತಿ ನಿಯಮಗಳ ಸೂಕ್ತ ಮಾರ್ಪಾಟಿನೊಂದಿಗೆ ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು ಸೂತ್ರದಡಿ ಕಾರ್ಯತತ್ಪರರಾಗಬೇಕು. ಮರಗಳನ್ನು ಸಗಟಾಗಿ ವಿಲೇವಾರಿ ಮಾಡಿದ ನಂತರ ಎಲ್ಲಾ ಆಗಿಹೋಗಿದೆ ಎಂದು ಆಕಾಶ ತೋರಿಸುವುದನ್ನು ಬಿಟ್ಟು ಈ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು. ಕಡೆಗೆ ಯಾರೂ ಆಯ್ಕೆ ಮಾಡಿಕೊಳ್ಳದೇ ಉಳಿದ ಮರಗಳನ್ನು ಕಾಲಮಿತಿಯಲ್ಲಿ ಸಗಟಾಗಿ ಮಾರಾಟ ಮಾಡಲು ಎರಡನೇ ಹಂತದ ಟೆಂಡರ್ ಕರೆಯಬಹುದಾಗಿದೆ. ಯಾರೂ ಕೇಳದಿದ್ದರೆ ಯಾರ್‍ಯಾರಿಗೋ ಲಾಭ ಮಾಡಿಕೊಡಬಲ್ಲ ಈ ರೀತಿಯ ಒಳ ಒಪ್ಪಂದಗಳು ಪ್ರತೀದಿನವೂ ಯಾರ ಗಮನಕ್ಕೂ ಬಾರದೇ ನಡೆದುಕೊಂಡು ಹೋಗುತ್ತಲೇ ಇರುತ್ತವೆ.
(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248